ಶ್ರೀ ಸುಭಾಷ್ ಅಸ್ಕೂರೆ.—ಇದಕ್ಕಾಗಿ ಒಂದು ಬೋರ್ಡ್ ಇದೆ. ಅವರು ತೀರ್ಮಾನ ಮಾಡುತ್ತಾರೆ. ಎಷ್ಟು ನೀರು ಅವರಿಗೆ ಕೊಡಬೇಕು ಎನ್ನುವುದನ್ನು ಅವರು ನಿರ್ಣಯ ತೆಗೆದುಕೊಳ್ಳುತ್ತಾರೆ. ಇದನ್ನು ವಿಚಾರ ಮಾಡದೇ ಹೋದರೆ ಈ ಬೋರ್ಡ್ ಏತಕ್ಕೆ ಇರಬೇಕು, ಇರಬೇಕಾಗಿಯೇ ಇಲ್ಲ. ಆದುದರಿಂದ ಈ ಬೋರ್ಡ್‌ನವರು ಯಾವ ರೀತಿಯಾಗಿ ಒಂದು ನಿರ್ಣಯ ತೆಗೆದುಕೊಳ್ಳುತ್ತಾರೋ ಆ ರೀತಿಯಾಗಿ ಆದರೂ ಕೂಡ ಒಂದು ನಿರ್ಣಯ ತೆಗೆದುಕೊಳ್ಳಬೇಕು.

ಶ್ರೀ ಕೆ. ಎಫ್. ಪಾಟೀಲ್.—ಶಿವಮೊಗ್ಗ, ಹೊನ್ನಾಳಿ, ಹಿರೇಕೆರೂರು ಈ ಭಾಗಗಳಲ್ಲಿ ತುಂಗಭದ್ರಾ ಅಣೆಕಟ್ಟಿನ ಮೇಲ್ಭಾಗದ ಹೊಳೆ ಯೋಜನೆಗಳ ಬಗ್ಗೆ ಏನಾದರೂ ಯೋಜನೆಗಳು ಇವೆಯೇ ? ಇದ್ದರೆ ಯಾವುದು ಇದೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಸುಭಾಸ್ ಅಸ್ಕೂರೆ.—ಅದರಲ್ಲಿ ನೀರು ಎಷ್ಟು ಹರಿದು ಹೋಗುತ್ತದೆ ಅನ್ನುವುದನ್ನು ನೋಡಿಕೊಂಡು ಅಣೆಕಟ್ಟನ್ನು ಕಟ್ಟಬೇಕಾಗುತ್ತದೆ. ಆದರೆ ಮಳೆಗಾಲದಲ್ಲಿ ಅದರಲ್ಲಿ ಹೆಚ್ಚು ನೀರು ಹರಿದು ಹೋಗುತ್ತದೆ ಅಂತ ಹೇಳಿ ನಾವು ಅಲ್ಲಿ ಡ್ಯಾಮ್ ಕಟ್ಟಬೇಕು ಅಂದರೆ ಆಗುವುದಿಲ್ಲ. ಕೆಲವು ನೀರನ್ನು ನಾವು ಆಂಧ್ರಕ್ಕೆ ಬಿಡಲೇಬೇಕಾಗುತ್ತದೆ. ತುಂಗಭದ್ರಾ ಸಬ್ ಬೇಸಿನ್‌ನಲ್ಲಿ ಎಷ್ಟು ನೀರು ಬರುತ್ತದೆ ಅದನ್ನು ನೋಡಿಕೊಂಡು ಮಂತ್ರಾಲಯ ವಾಟರ್ ಡಿಸ್ಪ್ಯೂಟ್ ಬೇರೆ ಇದೆ ; ಅವರಲ್ಲಿ ನಮಗೆ ಏನು ಬರುತ್ತದೆ ಅದನ್ನೂ ನೋಡಿಕೊಂಡು ನಾವು ಯೋಜನೆಗಳು ಮಾಡಬೇಕಾಗುತ್ತದೆ ಬರೀ ಮಳೆಗಾಲದಲ್ಲಿ ಹೆಚ್ಚು ನೀರು ಬರುತ್ತದೆ ಅಂತ ನೋಡಿಕೊಂಡು ರಿಸರ್ವಾಯರ್‌ಗಳನ್ನು ಕಟ್ಟಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಫ್. ಪಾಟೀಲ್.—ಯಾವ ಯಾವ ಪ್ರಾಜೆಕ್ಟ್‌ಗಳ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಾ ಇದೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಸುಭಾಸ್ ಅಸ್ಕೂರೆ.—ಅದಕ್ಕೆ ಪ್ರತ್ಯೇಕವಾದ ನೋಟೀಸ್ ಕೊಟ್ಟರೆ ಪ್ರತಿಯೊಂದು ಪ್ರಾಜೆಕ್ಟ್ ಬಗ್ಗೆಯೂ ಹೇಳುತ್ತೇನೆ.

Unauthorised Arrack Shops in Hirekerur Taluk

787. SRI B. G. BANAKAR (Hirekerur).—

Will the Minister for Excise and Labour be pleased to state :—

(*a*) whether it has come to the notice of Government that the Excise contractors of Hirekerur Taluk are running 13 authorised arrack shops in the villages of Hirekerur, Rattihalli, Masura, Chikkerur, Kodu, Nagavanda Hamsa Bhavi, Halluva etc., and nearly 80-85 unauthorised shops in the villages of Medura, Kada, Maggi and Yathinahalli, etc ;

(*b*) why the Government should not take suitable action to stop unauthorised arrack shops running without licence and to take action to start arrack shops only after obtaining licence in every village ;

(*c*) the action Government would take against the persons who are running unauthorised arrack shops in each village in order to escape from payment of fee of Rs. 500 to obtain a licence ;

(*d*) the action Government would take with regard to the sale of arrack in authorised and unauthorised shops in Hirekerur Taluk at Rs. 13-50 per litre higher than the rate fixed by the Government ?

SRI S. M. YAHYA (Minister for Excise and Labour).—

(*a*) There are 20 authorised arrack shops existing in Hirekerur Taluk and running of unauthorised shops have not come to the notice of Government.

(*b*) This question does not arise in view of the reply above.

(*c*) Suitable action would be taken if unauthorised shops are existing ;

(*d*) The Government have not fixed the ratail rate of arrack and it whould be sold keeping in view of the shop rent and other expenses.

ಶ್ರಿ ಬಿ. ಜಿ. ಬಣಕಾರ್.—(ಅ) ಗೆ ಉತ್ತರವಾಗಿ ಹಿರೇಕೆರೂರು ತಾಲ್ಲೂಕಿನಲ್ಲಿ ೨೦ ಅಧಿಕೃತ ಸಾರಾಯಿ ಅಂಗಡಿಗಳು ಜಾರಿಯಲ್ಲಿವೆ, ಅನಧಿಕೃತ ಸಾರಾಯಿ ಅಂಗಡಿಗಳು ನಡೆಯುವುದು ಇವಾಖೆಯ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದೀರಿ. ಅಧಿಕೃತವಾಗಿ ಈ ಷಾಪುಗಳನ್ನು ಇಡುವುದಕ್ಕೆ ಅವರ ಹತ್ತಿರ ೫೦೦ ರೂಪಾಯಿ ತೆಗೆದುಕೊಂಡು ಲೈಸನ್ಸ್ ಕೊಡಿರಿ ಅದಕ್ಕೆ ನನ್ನ ಆಡ್ಡಿ ಇಲ್ಲ. ಸರ್ಕಾರಕ್ಕೆ ವರಮಾನವೂ ಬರುತ್ತದೆ. ಇಲ್ಲದೇ ಹೋದರೆ ಅನಧಿಕೃತವಾಗಿ ಈ ಷಾಪುಗಳನ್ನು ಏನು ಇಟ್ಟಿದ್ದಾರೆ ಅದನ್ನು ಮುಚ್ಚಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಎಸ್. ಎಂ. ಯಾಹ್ಯಾ.—ಅವರು ಆ ರೀತಿ ಷಾಪು ಇಡುವುದಕ್ಕೆ ಲೈಸನ್ಸ್ ಫೀಸ್ ೫೦೦ ರೂಪಾಯಿ ಅಲ್ಲ ೧೦೦೦ ರೂಪಾಯಿ ಇಟ್ಟಿದ್ದೇವೆ.

ಶ್ರೀ ಬಿ. ಜಿ. ಬಣಕಾರ್.—೧೦೦೦ ರೂಪಾಯಿಯಂನ್ನೇ ತೆಗೆದುಕೊಳ್ಳಿ. ಮತ್ತಷ್ಟು ಹೆಚ್ಚು ಮಾನ ಬರುತ್ತದೆ. ಆದರೆ ಅನಧಿಕೃತವಾಗಿ ಇರುವ ಷಾಪುಗಳನ್ನು ಮುಚ್ಚಿಸುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ನಮಗೆ ಬಂದಿರುವ ವರ್ತಮಾನದ ಪ್ರಕಾರ ಅನಧಿಕೃತ ಸಾರಾಯಿ ಅಂಗಡಿಗಳು ಇಲ್ಲ. ಎಲ್ಲಿ ಅನ್‌ಲೈಸನ್ಸ್ಡ್ ಷಾಪ್ ಇವೆಯೋ ಅಲ್ಲಿ ಕಾನೂನು ಪ್ರಕಾರ ಅಧಿಕಾರಿಗಳು ಹೋಗಿ ಮುಚ್ಚಿಸಬೇಕು ಎಂದು ನಾವು ಅಧಿಕಾರಿಗಳಿಗೆ ಹೇಳಿದ್ದೇವೆ. ಆ ಕೆಲಸವನ್ನು ಅವರು ಖಂಡಿತವಾಗಿಯೂ ಮಾಡುತ್ತಾರೆ. ಈಗ ಹಿರೇಕೆರೂರು ತಾಲ್ಲೂಕಿನಲ್ಲಿ ೨೦ ಅಧಿಕೃತ ಸಾರಾಯಿ ಅಂಗಡಿಗಳು ಜಾರಿಯಲ್ಲಿವೆ. ಅದು ಕಡಿಮೆ ಅನ್ನುವುದಾದರೆ ಇನ್ನೂ ಹೆಚ್ಚು ಲೆಸೆನ್ಸ್ ಕೊಟ್ಟು ಸರ್ಕಾರಕ್ಕೆ ಇನ್ನೂ ಹೆಚ್ಚು ಆದಾಯ ಬರುವಂತೆ ಮಾಡುತ್ತೇವೆ.

ಶ್ರೀ ಬಿ. ಜಿ. ಬಣಕಾರ್.—ಸರ್ಕಾರದ ರೇಟು ಒಂದು ಲೀಟರ್ ಸಾರಾಯಿಗೆ ೫ ರೂಪಾಯಿ ಇದ್ದರೆ ಗ್ರಾಮಾಂತರ ಪ್ರದೇಶದಲ್ಲಿ ೧೩-೫೦ ರಂತೆ ಒಂದು ಲೀಟರ್‌ಗೆ ಮಾರಾಟ ಮಾಡುತ್ತಿದ್ದಾರೆ. ಈಗ ಸಿವೆಂಟ್‌ಗೆ ಯಾವ ರೀತಿಯಾದ ಒಂದು ಕಂಟ್ರೋಲ್ ರೇಟ್ ಮಾಡಿದ್ದಾರೋ ಅದೇ ರೀತಿ ಇದಕ್ಕೂ ಒಂದೇ ರೀತಿಯಾಗಿ ಕಂಟ್ರೋಲ್ ರೇಟ್ ಮಾಡಿಬಿಟ್ಟರೆ ಇದರಿಂದ ಸಾಮಾನ್ಯ ಜನರಿಗೆ ಒಡವರಿಗೆ ಅನುಕೂಲವಾಗುತ್ತದೆ. ಆದುದರಿಂದ ಇದಕ್ಕೆ ಒಂದು ಸೀಲಿಂಗ್ ರೇಟ್ ೫-೬-೭ ರೂಪಾಯಿ ಎಂದು ಒಂದು ರೇಟನ್ನು ನಿಗದಿ ಮಾಡುವುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಸರ್ಕಾರದವರು ಇದಕ್ಕೆ ೫ ರೂಪಾಯಿ ಅಂತ ಏನೂ ಗೊತು ಮಾಡಿಲ್ಲ ಇದಕ್ಕೆ ಡ್ಯೂಟೀಸ್ ೨-೫೦ ಪೈಸೆ ಒಂದು ಬಲ್ಕ್ ಲೀಟರ್‌ಗೆ ಬೀಳುತ್ತದೆ. ಮತ್ತು ಒಂದು ಬಲ್ಕ್ ಲೀಟರ್ ಪ್ರೈಸ್, ೨-೦೩ ಪೈಸೆ ಹೆಲ್ತ್ ಸೆಸ್ ೩೨ ಪೈಸೆ, ಎಜುಕೇಷನ್ ಸೆಸ್ ೧೨ ೦೫ ಪೈಸೆ, ಹೆಲ್ತ್ ಸೆಸ್ ೩೨ ಪೈಸೆ ಸೇಲ್ಸ್ ಟ್ಯಾಕ್ಸ್ ೧೨.೦೫ ಪೈಸೆ ಇಷ್ಟು ಡ್ಯೂಟೀಸ್ ಕೊಡುವಂಥಾದ್ದು ಇದೆ. ದರ ಇಷ್ಟೇ ಎಂದು ಗೊತ್ತುಮಾಡಿಲ್ಲ. ಮತ್ತು ಎಕ್ಸೈಜ್ ಆಕ್ಟ್ ರೂಲು ೪೦ರ ಪ್ರಕಾರ ಡೆಪ್ಯೂಟಿ ಕಮೀಷನರಿಗೆ ಡಿಸ್ಕ್ರಿಮಿನೇಷನ್ ಪವರ್ಸ್ ಇದೆ. ಅವರು ಮಿನಿಮಮ್ ಮತ್ತು ಮ್ಯಾಕ್ಸಿಮಮ್ ರೇಟನ್ನು ಫಿಕ್ಸ್ ಮಾಡುತ್ತಾರೆ.

ಶ್ರೀ ಬಿ. ಜಿ. ಬಣಕಾರ್.—ಡೆಪ್ಯೂಟಿ ಕಮೀಷನರ್ ಮಿನಿಮಮ್ ಮತ್ತು ಮ್ಯಾಕ್ಸಿಮಮ್‌ನ ಒಂದು ಆಧಾರದ ಮೇಲೆ ಅವರಿಗೆ ಬೀಳತಕ್ಕಂಥ ಒಂದು ಖರ್ಚನ್ನು ಸೇರಿಸಿ ಹೆಚ್ಚು ಬೀಳದಂತಹ ಒಂದು ದರ ನಿಗದಿ ಗೊಳಿಸುವುದಕ್ಕೆ ಅವರಿಗೆ ಒಂದು ಆದೇಶ ಕೊಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ :—ಆ ಸಲಹೆಯೂ ಕೂಡ ಬಂದಿದೆ. ಅದನ್ನು ಅವರು ಪರಿಶೀಲನೆ ಮಾಡುತ್ತಿದ್ದಾರೆ.

Compensation to Officer who were holding Hereditary Posts.

805. SRI CHOWDA REDDY (Chintamani) —

Will the Minister for Revenue be pleased to state :—

(*a*) whether it is not a fact that Government has abolished the posts of Village Officers such as Thoti, Talwar and Neeraganties ;

(*b*) if so, whether compensation amount has been paid to all such Village Officers in all the taluks of the State ;

(*c*) if so, whether it has come to the notice of Government that compensation amount to such officers in Chintamani Taluk of Kolar District has not yet been paid ;

(*d*) if so, the reasons and the action Government intends to take for prompt payment of the same ?

SRI N. HUTCHAMASTHI GOWDA (Minister for Revenue).—

(*a*) The hereditary posts of Village Officers have been abolished

(*b*) Not in all the Taluks.

(*c*) No. Out of a total of 587 applications of Chintamani Taluk some applications have already been disposed of involving a sum of Rs. 20,836.11 paise Action has been initiated in respect of the remaining applications.

(*d*) Due to pressure of work upon the Assistant Commissioner, Chikkaballapur and the inadequate staff Compensation to the all the applicants could not be disbursed. Compensation will be paid at an early date.

ಶ್ರೀ ಬೌಡರೆಡ್ಡಿ.—ಸ್ವಾಮಿ, (ಅ) ಗೆ ಉತ್ತರವಾಗಿ ಗ್ರಾಮಾಧಿಕಾರಿಗಳ ಆನುವಂಶಿಕ ಹುದ್ದೆಗಳನ್ನು ರದ್ದುಗೊಳಿಸಲಾಗಿದೆ ಎಂದು ಹೇಳಿದ್ದೀರಿ. ಇದನ್ನು ರದ್ದುಗೊಳಿಸಿದ ಮೇಲೆ ಬೇರೆ ಅರೇಂಜ್‌ಮೆಂಟ್ ಏನು ಮಾಡಿದ್ದೀರಿ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ —ವಿಲೇಜ್ ಆಕೌಂಟೆಂಟ್‌ರನ್ನು ಕ್ಷಾನುಭೋಗರ ಸ್ಥಳದಲ್ಲಿ ನೇಮಕ ಮಾಡಿದ್ದೇವೆ ತೋಟಿ, ತಳವಾರ ಹಾಗೂ ನೀರಗಂಟಿಗಳವರು ಮೊದಲು ಯಾವ ರೀತಿ ಇದ್ದರೋ ಅದೇ ರೀತಿಯಲ್ಲಿ ಮುಂದುವರೆಯುತ್ತಿದಾರೆ.

ಶ್ರೀ ಬೌಡರೆಡ್ಡಿ.—ತಾವು ಈ ಮನೆಯಲ್ಲಿ ಒಂದು ಸಾರಿ ಹೇಳಿದಿರಿ, ಅವರೇ ವಾಲಂಟರಿಯಾಗಿ ಮುಂದುವರೆಯುತ್ತಿದ್ದಾರೆ ಅವರಿಗೆ ಬೇರೆ ಏನೂ ಕೊಡುತ್ತಾ ಇಲ್ಲ ಎಂದು. ಅವರನ್ನು ಅ ಾಲಿಷ್ ಮಾಡಿದರೆ ಬೇರೆ ಯಾರನ್ನಾದರೂ ನೇಮಕ ಮಾಡುವುದಕ್ಕೆ ಸರ್ಕಾರಕ್ಕೆ ಇರುವ ಅಡ್ಡಿ ಏನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಡ್ಡಿ ಏನೂ ಇಲ್ಲ ಇದು ಸರ್ಕಾರಕ್ಕೂ ಗೊತ್ತಿದೆ. ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ ಈ ಬಗ್ಗೆ ಒಂದು ತಿದ್ದುಪಡಿ ತರಬೇಕಾಗಿದೆ. ಅದರಿಂದ ಈ ಕೆಲಸ ನಿಧಾನ ವಾಗಿದೆ ಮೊದಲು ಅವರು ಯಾವ ಕಂಡೀಷನ್‌ಮೇಲೆ ಮುಂದುವರೆಯುತ್ತಿದ್ದರೋ ಅದೇ ಕಂಡೀಷನ್ ಮೇಲೆ ಮುಂದುವರೆಯುತ್ತಿದ್ದಾರೆ. ಅದೇ ರೀತಿ ಸರ್ಕಾರದ ಆ ಆಜ್ಞೆಯೂ ಇರುವುದರಿಂದ ಅವರು ಮುಂದುವರೆದುಕೊಂಡು ಹೋಗುತ್ತಿದ್ದಾರೆ.